ಶ್ರೀ ಎಚ್. ಡಿ. ದೇವೇಗೌಡ.—ತಾಲ್ಲೂಕಿನಲ್ಲಿ ಏನಾದರೂ ತೊಂದರೆ ಇದ್ದರೆ.

ಶ್ರೀ ಧರ್ಮಸಿಂಗ್.—ಭೀಮಾ ನದಿ ದಂಡೆಯಲ್ಲಿರತಕ್ಕ ಹಳ್ಳಿಗಳಿಗೆ ಕುಡಿಯುವ ನೀರಿಗೆ ತೊಂದರೆಯಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ನಾಳೆ ಬೆಳಗ್ಗೆ ಇನ್ನೊಂದು ಪ್ರಶ್ನೆಯನ್ನು ಹಾಕಿ, ಇಂತಿಂಥ ಹಳ್ಳಿಗಳಲ್ಲಿ ತೊಂದರೆಯಾಗಿದೆ ಎಂದು ಹೇಳಿದರೆ, ಅಲ್ಲಿ ಈಗ ಇರತಕ್ಕ ವ್ಯವಸ್ಥೆಯನ್ನು ನೋಡಿ ಬೇರೆ ಕೊಳವೆ ಬಾವಿಗಳನ್ನಾದರೂ ಹಾಕಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ ಅದಿಲ್ಲದ್ದರೆ ಹೊರಗಡೆಯಿಂದ ಲಾರಿಗಳಿಂದಲಾದರೂ ನೀರನ್ನು ಹೊಡೆಸಿ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡ ಬೇಕಾಗುತ್ತದೆ. I will talk to the Rural Development Minister so far as supply of Drinking water to the villages on river bank is concerned.

ಶ್ರೀ ಧರ್ಮಸಿಂಗ್.—ತಾವು ಮೊದಲು ಬದಲಿ ವ್ಯವಸ್ಥೆಯನ್ನು ಮಾಡಿ.

ಶ್ರೀ ಎಚ್. ಡಿ. ದೇವೇಗೌಡ.—ಅದರ ಬಗ್ಗೆ ಪರೀಶಿಲನೆ ಮಾಡಿ ಏನು ಇದೆ ಎಂಬುದನ್ನು ನೋಡಿಸುತ್ತೇನೆ.

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್.—ಈಗಾಗಲೇ ಕಡ್ಡಿ ಗ್ರಾಮದ ಹತ್ತಿರ ಬ್ಯಾರೇಜೊಂದನ್ನು ನಿರ್ಮಿಸಲಾಗಿದ್ದು, ಅದು ಒಡೆದು ಹೋಗಿದೆ. ಅದನ್ನು ತಕ್ಷಣವೇ ರಿಪೇರಿ ಮಾಡಿಸಿದರೆ ಅದರಿಂದ ಅನುಕೂಲವಾಗಂತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಬ್ಯಾರೇಜೊಂದರ ವಿಚಾರವನ್ನು ಹೇಳುತ್ತಿದ್ದಾರೆ. ಇದು ನನ್ನ ವ್ಯಾಪ್ತಿಯಲ್ಲಿ ಬರುವುದಾದರೆ, ನಾನು ಆ ಬಗ್ಗೆ ಕಾರ್ಯಕ್ರಮ ತೆಗೆದು ಕೊಳ್ಳುತ್ತೇನೆ. ಇಲ್ಲವೇ ಅದು ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಬರುವುದಾದರೆ, ಅವರಿಗೆ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಕಂದಾಯ ಮಂತ್ರಿಗಳು ಗಮನ ಸೆಳೆಯುತ್ತೇನೆ.

ಅಧ್ಯಕ್ಷರು.—ನಂತರ ಉತ್ತರ ತರಿಸಿಕೊಡುತ್ತೇನೆ. ಮಾನ್ಯ ಕಂದಾಯ ಮಂತ್ರಿಗಳು ಸಭೆಯಲ್ಲಿಲ್ಲ.

೨) ಚಿಕ್ಕಮಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ನಡೆದ ಡಕಾಯಿತಿಯ ಬಗ್ಗೆ.

ಶ್ರೀ ಆರ್. ವೆಂಕಟರಾಮಯ್ಯ.—ದಿನಾಂಕ ೨೧-೩-೧೯೮೮ ರಂದು ಚಿಕ್ಕಮಗಳೂರಿನಲ್ಲಿ ನಡೆದ ಡಕಾಯಿತಿ, ಕೋಲಾರ ಹಾಗೂ ರಾಜ್ಯದಲ್ಲಿನ ಕೆಲವು ನಗರಗಳ ಹಾಗೂ ಪಟ್ಟಣಗಳ ಹೊರವಲಯಗಳಲ್ಲಿ ನಡೆದಿರುವ ಡಕಾಯಿತಿ ಬಗ್ಗೆ ಗೃಹ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ(ಗೃಹ ಮಂತ್ರಿಗಳು).—

ವೃತ್ತಿನಿರತ ಅಪರಾಧ ಪ್ರವೃತ್ತಿಯ (ಪ್ರೊಫೆಶನಲ್) ತಂಡಗಳು ರಾಜ್ಯದ ಅಲ್ಲಲ್ಲಿ ಡಕಾಯಿತಿ ಅಪರಾಧಗಳನ್ನು ಮಾಡಿದ್ದು, ಅವುಗಳ ಪತ್ತೆ ಮತ್ತು ನಿಯಂತ್ರಣಕ್ಕೆ ಸರ್ಕಾರ ಸೂಕ್ತ ಕ್ರಮವನ್ನು ತೆಗೆದುಕೊಂಡಿದೆ. ರಾಜ್ಯದಲ್ಲಿ ಆಗುತ್ತಿರುವ ಡಕಾಯಿತಿ ಪ್ರಕರಣಗಳ ಪಿಡುಗು ಅಷ್ಟೇನೂ ವಿಂತಿಮಿಾರಿದ್ದಾಗಿಲ್ಲ. ಕಳೆದ ಎಂಟು ವರ್ಷಗಳಲ್ಲಿ ಆಗಿರುವ ಡಕಾಯಿತಿ ಪ್ರಕರಣಗಳ ಈ ಕೆಳಕಂಡ ಅಂಕಿಅಂಶಗಳು ಈ ವಿಷಯವನ್ನು ಸ್ಪಷ್ಟಪಡಿಸುತ್ತವೆ.

೧) ೧೯೮೦—೨೫೫	೫) ೧೯೮೪—೨೨೩
೨) ೧೯೮೧—೨೩೧	೬) ೧೯೮೫—೧೭೫
೩) ೧೯೮೨—೧೭೧	೭) ೧೯೮೬—೨೫೯
೪) ೧೯೮೩—೧೬೬	೮) ೧೯೮೭—೧೭೫

ಈ ವರ್ಷ ೧-೧-೧೯೮೮ ರಿಂದ ೧೫-೩-೮೮ರವರೆಗೆ ೬೫ ಪ್ರಕರಣಗಳು ವರದಿಯಾಗಿವೆ.

೧೯೮೭ರಲ್ಲಿ ವರದಿಯಾದ ೧೭೫ ಮೊಕದ್ದಮೆಗಳ ಪೈಕಿ ೮೫ ಮೊಕದ್ದಮೆಗಳನ್ನು ಮತ್ತು ಈ ವರ್ಷ ವರದಿಯಾದ ೩೫ ಡಕಾಯಿತಿ ಪ್ರಕರಣಗಳ ಪೈಕಿ ೧೨ ಪ್ರಕರಣಗಳನ್ನು ವೃತ್ತಿನಿರತ ಅಪರಾಧಿಗಳು ಎಸಗಿದ್ದು, ಇನ್ನುಳಿದವು ತಾಂತ್ರಿಕ (ಟೆಕ್ನಿಕಲ್) ಡಕಾಯಿತಿ ಪ್ರಕರಣಗಳಾಗಿರುತ್ತವೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ೧೯೮೭ರಲ್ಲಿ ಒಂದು ಪ್ರಕರಣ ನಡೆದಿದ್ದು, ಅದನ್ನು ಪತ್ತೆ ಮಾಡಿ ೮ ಜನ ಆರೋಪಿಗಳನ್ನು ಬಂಧಿಸಿ, ಅವರ ಮೇಲೆ ದೋಷಾರೋಪಣೆಯನ್ನು ಸಲ್ಲಿಸಲಾಗಿದ್ದು, ಆ ಪ್ರಕರಣ ನ್ಯಾಯಾಲಯದ ವಿಚಾರಣೆಯಲ್ಲಿದೆ. ೧೯೮೭ ರಲ್ಲಿ ಒಂದೂ ಡಕಾಯಿತಿ ಪ್ರಕರಣ ನಡೆದಿರುವುದಿಲ್ಲ. ಈ ವರ್ಷ ೨೧-೩-೮೮ರ ಬೆಳಗಿನ ಜಾವ ೨ ರಿಂದ ೩-೩೦ ಗಂಟೆಯ ಸಮಯದಲ್ಲಿ ಒಂದು ಡಕಾಯಿತಿ ಪ್ರಯತ್ನ ನಡೆದಿದ್ದು ಚಿಕ್ಕಮಗಳೂರಿನ ಹೊರವಲಯದ ದಂಟರಮಕ್ಕಿ ಪ್ರದೇಶದಿಂದ ವರದಿಯಾಗಿದ್ದು ಅದರಲ್ಲಿ ಜರ್ಮಿ ಡಿಸೋಜ ಎಂಬುವವರ ಮನೆಯ ಹಿಂಬಾಗಿಲ ಅಗುಳಿಯನ್ನು ತೆಗೆದು ಒಳಕ್ಕೆ ಬರಲು ಪ್ರಯತ್ನಿಸಿದ ಅಪರಾಧಿಗಳು ವಿಫಲರಾಗಿ ಮನೆಯ ಛಾವಣಿಯ ಮೇಲೆ ಪತ್ತಿ ಹೆಂಚುಗಳನ್ನು ತೆಗೆದು ಪ್ರವೇಶ ಮಾಡಲು ಪ್ರಯತ್ನಿಸಿದರು. ಮನೆಯವರು ಗಲಾಟೆ ಮಾಡಿದ್ದರಿಂದ ಅವರು ಓಡಿ ಹೋಗಿರುತ್ತಾರೆ. ಈ ಪ್ರಕರಣದಲ್ಲಿ ೩೦ ರಿಂದ ೩೫ ವರ್ಷದ ೮ ಜನ ಆರೋಪಿಗಳು ಇದ್ದರೆಂದು ತಿಳಿದು ಬಂದಿದೆ.

೨೧-೩-೮೮ರ ಬೆಳಗಿನ ಜಾವವೇ ಒಂದು ಸುಲಿಗೆ ಮತ್ತು ಇನ್ನೊಂದು ಕನ್ನಗಳ್ಳತನದ ಪ್ರಕರಣ ಹಾಗೂ ಒಂದು ಸುಲಿಗೆಯ ಪ್ರಯತ್ನ ಮತ್ತು ಒಂದು ಕಳ್ಳತನದ ಪ್ರಯತ್ನ ಇದೇ ದಂಟರಮಕ್ಕಿ ಪ್ರದೇಶದಿಂದ ವರದಿಯಾಗಿದ್ದು, ಮೇಲ್ಕಂಡ ಗುಂಪಿಗೆ ಸೇರಿದ ವ್ಯಕ್ತಿಗಳೇ ಈ ಪ್ರಕರಣಗಳನ್ನೂ ಮಾಡಿರಬೇಕೆಂದು ಶಂಕಿಸಲಾಗಿದೆ.

ಸುಲಿಗೆಯ ಪ್ರಕರಣದಲ್ಲಿ ಇಬ್ಬರು ಆರೋಪಿಗಳು ಹಿಂಬಾಗಿಲಿನ ಅಗುಳಿಯನ್ನು ತೆಗೆದು ಒಳಕೆ ಪ್ರವೇಶಿಸಿ, ಈರಮ್ಮ ಎಂಬುವರ ಮೈಮೇಲೆ ಇದ್ದ ಚಿನ್ನದ ಓಲೆ ಮಂತ್ರ ಮಾಂಗಲ್ಯತ್ತನ್ನು ಪೆಟ್ಟಿಗೆಯಲ್ಲಿದ್ದ ೪೯೦೦ ರೂ. ಹಣ ಮಂತ್ರ ಬೆಳ್ಳಿ ಡಾಬನ್ನು ಕಳವು ಮಾಡಿರುತ್ತಾರೆ.

ಮನೆಗಳ್ಳತನದ ಪ್ರಕರಣದಲ್ಲಿ ಈಶ್ವರಪ್ಪ ಎಂಬುವವರ ಮನೆಗೆ ಹಿಂಬಾಗಿಲಿನ ಚಿಲಕವನ್ನು ತೆಗೆದು ಒಂದು ನೂರು ರೂ. ಬೆಲೆ ಬಾಳುವ ಕೋಳಿ ಮತ್ತು ೫೦೦ ರೂ. ಬೆಲೆಬಾಳುವ ಬಟ್ಟೆಗಳನ್ನು ಅಪಹರಿಸಿಕೊಂಡು ಹೋಗಿರುತ್ತಾರೆ.

ಕೋಲಾರ ಜಿಲ್ಲೆಯಲ್ಲಿ ಕಳೆದ ವರ್ಷ ೧೨ ಡಕಾಯಿತಿ ಪ್ರಕರಣಗಳು ವರದಿಯಾಗಿದ್ದು, ಅವುಗಳ ಪೈಕಿ ಒಂದು ಪ್ರಕರಣ ಕಳೆದ ವರ್ಷವೇ ಪತ್ತೆಯಾಗಿದ್ದು. ಬಾಕಿ ಉಳಿದ ಪ್ರಕರಣಗಳ ಪೈಕಿ ೧೦ ಪ್ರಕರಣಗಳನ್ನು ಇತ್ತೀಚೆಗೆ ಆಂಧ್ರದವರಾದ ಐದು ಮಂದಿ ಡಕಾಯಿತರನ್ನು ದಸ್ತಗಿರಿ ಮಾಡುವುದರಿಂದ ಪತ್ತೆ ಮಾಡಲಾಗಿದೆ. ಈ ವರ್ಷ ೧೭-೩-೮೮ರ ಬೆಳಗಿನ ಜಾವ ಸುಮಾರು ಒಂದು ಗಂಟೆಗೆ ಆದ ಒಂದೂ ಪ್ರಕರಣವನ್ನು ಬಿಟ್ಟರೆ ಇನ್ಯಾವ ಪ್ರಕರಣವೂ ಆಗಿಲ್ಲ. ಈ ಪ್ರಕರಣದಲ್ಲಿ ೮ ಜನ ಆರೋಪಿಗಳು ಕೋಲಾರದಿಂದ ಸುಮಾರು ೪ ಕಿ.ಮಿ. ದೂರದಲ್ಲಿ ಇರುವ ಮಣಿಗಟ್ಟಿ ರೋಡಿನಲ್ಲಿರುವ ಒಂಟಿ ಮನೆಗೆ ಮುತ್ತಿಗೆ ಹಾಕಿ ಮನೆಯಲ್ಲಿದ್ದವರನ್ನು ಹೊಡೆದು ಭಯಗೊಳಿಸಿ, ೨೭೦೦ ರೂ. ಮೌಲ್ಯದ ಚಿನ್ನ, ಬೆಳ್ಳಿ ಆಭರಣಗಳು ಮತ್ತು ೨ ಗಡಿಯಾರಗಳನ್ನು ಕಳವು ಮಾಡಿಕೊಂಡು ಹೋಗಿರುತ್ತಾರೆ. ಸ್ಥಳೀಯ ಪೋಲೀಸರು ತನಿಖೆ ಮಾಡುತ್ತಿದ್ದಾರೆ.

ಡಕಾಯಿತಿ ಪ್ರಕರಣಗಳನ್ನು ಪತ್ತೆಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗಿದ್ದು, ಪೊಲೀಸ್ ಇಲಾಖೆ ಹಲವು ಪ್ರಕರಣಗಳಲ್ಲಿ ಶ್ಲಾಘನೀಯ ರೀತಿಯಲ್ಲಿ ಕರ್ತವ್ಯವನ್ನು ನಿರ್ವಹಿಸಿದೆ. ೧೯೮೭ನೇ ಇಸವಿಯ ಕೊನೆಯ ಭಾಗದಲ್ಲಿ ೫೨ ಡಕಾಯಿತಿ ಪ್ರಕರಣಗಳನ್ನು ಪತ್ತೆ ಹಚ್ಚಿ ೨೦.೨೦ ಲಕ್ಷ ಬೆಲೆಯಷ್ಟು ಕಳುವಾದ ಮಾಲಿನ ಪೈಕಿ ೧೭.೪೮ ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡು ವೃತ್ತಿನಿರತ ಅಪರಾಧಿ ತಂಡಗಳಿಗೆ ಸೇರಿದ ೮೩ ಜನರನ್ನು ಬಂಧಿಸಲಾಯಿತು ಈ ವರ್ಷ ವೃತ್ತಿನಿರತ ಅಪರಾಧಿಗಳಿಂದ ಆದ ೧೨ ಪ್ರಕರಣಗಳ ಪೈಕಿ ೪ ಪ್ರಕರಣಗಳು ಪತ್ತೆಯಾಗಿದ್ದು ೧೩ ಜನರನ್ನು ಬಂಧಿಸಲಾಗಿದೆ.

ಡಕಾಯಿತಿ ಅಪರಾಧಗಳನ್ನು ತಡೆಗಟ್ಟಲು ಸರ್ಕಾರ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದೆ. ಆಯಾ ಪ್ರದೇಶಗಳಲ್ಲಿ ಡಕಾಯಿತಿ ಪ್ರಕರಣಗಳ ತಪಾಸಣೆಗೆ ಪ್ರತ್ಯೇಕ ತನಿಖಾ ದಳಗಳನ್ನು ರಚಿಸಿ ಅವುಗಳ ಕಾರ್ಯವನ್ನು ನಿಕಟವಾಗಿ ಪರಿಶೀಲಿಸಲಾಗುತ್ತಿದೆ. ಅಪರಾಧಕ್ಕೆ ಹೆಚ್ಚು ಒಳಗಾದ

ಪ್ರದೇಶಗಳಲ್ಲಿ ವಿಶೇಷ ಗಸ್ತಿನ ವ್ಯವಸ್ಥೆ ಮಾಡಿ ಗಸ್ತಿನ ಪಡೆಗಳಿಗೆ ವಾಹನ, ನಿಸ್ತಂತು, ಶಸ್ತ್ರಾಸ್ತ್ರಗಳು ಮತ್ತು ಸಿಬ್ಬಂದಿಯನ್ನು ಒದಗಿಸಲಾಗಿದೆ. ಈ ಗಸ್ತಿನ ಪಡೆಗಳ ಮೇಲ್ವಿಚಾರಣೆಗೆ ರಾತ್ರಿ ವೇಳೆಯಲ್ಲಿ ಹಿರಿಯ ಅಧಿಕಾರಿಗಳು ಗಸ್ತಿನಲ್ಲಿ ಭಾಗವಹಿಸುತ್ತಿದ್ದಾರೆ.

ಇತ್ತೀಚೆಗೆ ತಾನೆ ರಾಜ್ಯ ಮಟ್ಟದಲ್ಲಿ ಪೋಲೀಸ್ ಗುಪ್ತ ದಳದಲ್ಲಿ ಎರಡು ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ೪ ಡೆಪ್ಯುಟಿ ಪೋಲೀಸ್ ಸೂಪರಿಂಟೆಂಡೆಂಟ್, ೮ ಪೊಲೀಸ್ ಇನ್ಸ್‌ಪೆಕ್ಟರ್‌ಗಳು, ೩೬ ಪೊಲೀಸ್ ಕಾನ್ಸ್‌ಟೇಬಲ್‌ಗಳು ಇತ್ಯಾದಿ ಸಿಬ್ಬಂದಿಯನ್ನೊಳಗೊಂಡ ೨ ಡಕಾಯಿತಿ ಪ್ರತಿಬಂಧಕ ದಳಗಳನ್ನು ಸರ್ಕಾರ ಮಂಜೂರು ಮಾಡಿದೆ. ಅದಕ್ಕೆ ಸಿಬ್ಬಂದಿಯನ್ನು ಸಧ್ಯದಲ್ಲೆ ನೇಮಿಸಲಾಗುತ್ತದೆ. ಈ ಅಧಿಕ ಸಿಬ್ಬಂದಿಯಿಂದಾಗಿ ದರೋಡೆ ಪ್ರಕರಣಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪತ್ತೆಮಾಡಬಹುದಾದ ಸಾಧ್ಯತೆ ಇದೆ.

ಶ್ರೀ ಆರ್. ವೆಂಕಟರಾಮಯ್ಯ.— ಅಧ್ಯಕ್ಷರೇ ಅವರು ಓದಿದ ಹೇಳಿಕೆಯ ಒಂದು ಪ್ರತಿಯನ್ನು ನನಗೆ ಕಳುಹಿಸಿಕೊಡಬೇಕು. ಅವರು ತಮ್ಮ ಹೇಳಿಕೆಯಲ್ಲಿ ರಾಜ್ಯಾದ್ಯಂತ ೧೬೯ ಡಕಾಯಿತಿ ಆಗಿವೆ ಎಂದು ಹೇಳಿದ್ದಾರೆ. ಬೆಂಗಳೂರು ಹೊರವಲಯದಲ್ಲಿ, ಕೋಲಾರದ ಹೊರವಲಯ, ಕೋಲಾರ ಜಿಲ್ಲೆಯಲ್ಲಿ, ಚಿಕ್ಕಮಂಗಳೂರಿನಲ್ಲಿ ಒಟ್ಟಿನಲ್ಲಿ ರಾಜ್ಯವ್ಯಾಪಿ ಡಕಾಯಿತಿಗಳಾಗಿವೆ. ವೃತ್ತಿನಿರತ ಅಪರಾಧಿಗಳೇ ಇದನ್ನು ಮಾಡುತ್ತಾರೆ ಎಂದು ಗೊತ್ತಾದ ಮೇಲೆ ನಿಯಮ ೧೦೭, ೧೧೦–ಎಫ್ ಕೆಳಗೆ ಅವರನ್ನೆಲ್ಲಾ ಅರೆಸ್ಟ್ ಮಾಡಿದ್ದರೆ ಇದೆಲ್ಲಾ ಆಗುತ್ತಿರಲಿಲ್ಲ. ಎರಡನೆಯದಾಗಿ, ನಗರದ ಹೊರವಲಯದಲ್ಲಿ ಇರುವ ಜನ, ಅಲ್ಲಲ್ಲಿ ದೂರದಲ್ಲಿ ಮನೆ ಮಾಡಿಕೊಂಡಿರುವ ಜನ ಅಲ್ಲಿ ವಾಸ ಮಾಡುವುದಕ್ಕೆ ಭಯಪಟ್ಟು ಮನೆಯನ್ನು ಬಿಡಬೇಕಾದ ಪರಿಸ್ಥಿತಿ ಬಂದಿದೆ. ಪೋಲೀಸ್ ವ್ಯವಸ್ಥೆ ಡಕಾಯಿತರನ್ನು ಹಿಡಿಯುವುದರಲ್ಲಿ ವಿಫಲವಾಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.— ಕೇರಳದಲ್ಲಿ ಡಕಾಯಿತಿ ಆಗುತ್ತಾ ಇಲ್ಲವೇ ? ಅಲ್ಲಿ ತಮ್ಮದೇ ಸರ್ಕಾರ ಇದೆ.

ಶ್ರೀ ಆರ್. ವೆಂಕಟರಾಮಯ್ಯ.— ಅದಕ್ಕೂ ಇದಕ್ಕೂ ಏನು ಸಂಬಂಧ ?

ಶ್ರೀ ಆರ್. ಎಲ್. ಜಾಲಪ್ಪ.— ನಾವು ಎಲ್ಲಾ ಕಾರ್ಯಕ್ರಮ ಕೈಗೊಂಡಿದ್ದೇವೆ. ಆಂಧ್ರದಲ್ಲಿನ ಜನ ಇಲ್ಲಿ ಬಂದು ದರೋಡೆ ಮಾಡಿ, ಡಕಾಯಿತಿ ಮಾಡಿ ಅಲ್ಲಿಗೆ ಹೋಗುತ್ತಾರೆ. ನಾವು ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ರಾತ್ರೋರಾತ್ರಿ ಅಲ್ಲಿಂದ ಬಂದು ದರೋಡೆ ಮಾಡುವವರನ್ನು ಹಿಡಿಯುವುದು ಕಷ್ಟ ಇದೆ. ಈ ಜನರ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ನಾವು ಎಷ್ಟು ಜನ ಡಕಾಯಿತರನ್ನು ಹಿಡಿದು ಹಾಕಿದ್ದೇವೆ ಎಂಬುದನ್ನೂ ಗಣನೆಗೆ ತೆಗೆದುಕೊಳ್ಳಿ. ನಾವು ಎಲ್ಲಾ ಮನೆಗಳನ್ನು ಕಾಯುವುದಕ್ಕಾಗುವುದಿಲ್ಲ. ಅಲ್ಲಿಯ ಜನರೂ ತಮ್ಮ ಸುರಕ್ಷತೆಗಾಗಿ ಬಂದೂಕು, ಕತ್ತಿ, ಮಚ್ಚುಗಳನ್ನು ಇಟ್ಟುಕೊಂಡಿರಬೇಕಾಗುತ್ತದೆ. ೪ ಕೋಟಿ ಜನರ, ೫೦ ಲಕ್ಷ ಮನೆಗಳನ್ನೂ ಕಾಯುವುದು ಕಷ್ಟ. ಒಂದೊಂದು ಮನೆಯಮುಂದೆ ಒಬ್ಬೊಬ್ಬರನ್ನು ಹಾಕುವುದಕ್ಕಾಗುತ್ತದೆಯೇ ? ತಾವೂ ಅಡ್ವೊಕೇಟ್ ಇದ್ದೀರಿ. ಸಾಧ್ಯವಾದಷ್ಟೂ ರಾತ್ರಿ ಹೊತ್ತಿನ ಪೆಟ್ರೋಲಿಂಗ್ ಹೆಚ್ಚು ಮಾಡಿದ್ದೇವೆ. ಡಿ. ಐ. ಜಿ. ಯವರೂ ಕೂಡಾ ರಾತ್ರಿ ಹೊತ್ತು, ಅಮಾವಾಸ್ಯೆಗೆ ೮ ದಿನ ಹಿಂದೆ ಹಾಗೂ ಮುಂದೆ ಗಸ್ತು ಹೋಗುತ್ತಿದ್ದಾರೆ.

ಶ್ರೀ ಜಿ. ಮಾದೇಗೌಡ.— ಏಕೆ ಹೀಗೆ ಕೋಪದಿಂದ ಮಾತನಾಡುತ್ತಿದ್ದೀರಿ ? ನಾವೇನು ಡಕಾಯಿತಿ ಬಗ್ಗೆ ಮಾತನಾಡಬಾರದೇ ? ನೀವೇನು ಜಬರ್‌ದಸ್ತು ಮಾಡುತ್ತೀರಾ ?

ಅಧ್ಯಕ್ಷರು.— ತಾವು ಕೋಪ ಮಾಡಿಕೊಳ್ಳಬೇಡಿ. ತಾವು ಕುಳಿತುಕೊಳ್ಳಿ.

ಶ್ರೀ ಆರ್. ಎಲ್. ಜಾಲಪ್ಪ — ದಯವಿಟ್ಟು ಕ್ಷಮಿಸಿ. ಶಾಂತವಾಗಿರುತ್ತಿದ್ದ ಮಾನ್ಯ ಮಾದೇಗೌಡರಿಗೆ ಇವತ್ತು ಮೂಡೇ ಇಲ್ಲ. ಅವರು ಇಷ್ಟೊಂದು ಮಾತನಾಡಿದ್ದನ್ನು ನಾನು ಯಾವಾಗಲೂ ನೋಡಿಯೇ ಇಲ್ಲ. ನಾನು ಅವರನ್ನು ಬಹಳ ವರ್ಷಗಳಿಂದ ನೋಡಿದ್ದೇನೆ. ಇಷ್ಟು ಮಾತನಾಡಿದ್ದನ್ನು ನಾನು ನೋಡಿಲ್ಲ. ಪೋಲೀಸ್ ವಿಫಲವಾಗಿದೆ, ಏನೂ ಕೆಲಸ ಮಾಡಿಲ್ಲ. ಹಾಗೆ, ಹೀಗೆ ಎಂದು ಹೇಳುತ್ತಿದ್ದಾರೆ. ತಮಗೆ ಔದಾರ್ಯ ಇರಲಿ, ಬೇಕಾದಷ್ಟು ಕೆಲಸ ಮಾಡಿದ್ದೇವೆ. ರಾತ್ರಿ ಹಳ್ಳಿಗಳಲ್ಲಿ ಡಕಾಯಿತರು ಒಂದು ಮನೆಗೆ ಬಂದರೆ, ನಾವು ಪ್ರತಿಯೊಂದು ಮನೆಯನ್ನು ನೋಡಿ

ಕೊಳ್ಳುವುದಕ್ಕಾಗುವುದಿಲ್ಲ. ವಿ. ಡಿ. ಪಿ. ಎಸ್. ಮಾಡಿದ್ದೇವೆ, ಅವರಿಗೆ ತರಬೇತಿಯನ್ನು ಕೊಟ್ಟಿದ್ದೇವೆ. ರೈಫಲ್ ಶೂಟಿಂಗ್ ಮಾಡುವ ಬಗ್ಗೆ ಹೆಣ್ಣು ಸೈಕ್ಕಳಿಗೆ ತರಬೇತಿಯನ್ನು ಕೊಟ್ಟಿದ್ದೇವೆ. ನಮ್ಮ ಕೈಲಾದಷ್ಟು ಕೆಲಸ ಮಾಡಿದ್ದೇವೆ. ಜೊತೆಗೆ ಎರಡು ಹೊಸ ಆಂಟೀ ಡಕಾಯಿಟ್ಸ್ ಸ್ಕ್ವಾಡ್ ಮಾಡಿಕೊಂಡಿದ್ದೇವೆ. We are going to press them into service within fifteen days. ಇದನ್ನು ಕೂಡ ಮಾಡುತ್ತಿದ್ದೇವೆ. ನೆಗ್‌ಲೆಟ್ ಮಾಡಿಲ್ಲವೆನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.— ತಮ್ಮ ವಿವರ ಬೇಕಾಗಿಲ್ಲ, ಡಕಾಯಿತಿಯನ್ನು ಪ್ರಿವೆಂಟ್ ಮಾಡುವುದಕ್ಕೆ ಆಗುತ್ತದೆಯೇ ಇಲ್ಲವೇ ಎಂಬುದನ್ನು ಹೇಳಿ ? ಅದನ್ನು ಹೇಳುವುದನ್ನು ಬಿಟ್ಟು ಕೋಪ ಮಾಡಿಕೊಂಡು ಹೇಳುವುದು ಬೇಡ. ಮಾನ್ಯ ಮಾದೇಗೌಡರು ಸಹ ಅದನ್ನೆ ಹೇಳಿದ್ದಾರೆ. ಪ್ರಿವೆಂಟ್ ಮಾಡುವುದು ನಿಮ್ಮ ಕರ್ತವ್ಯ. ಅದನ್ನು ಬಿಟ್ಟು ನಾವು ಹಾಗೆ ಮಾಡಿದ್ದೇವೆ. ಹೀಗೆ ಮಾಡಿದ್ದೇವೆಂದರೆ ಹೇಗೆ ? ನೀವು ಏನಾದರೂ ಮಾಡಿ. ಜನರಿಗೆ ರಕ್ಷಣೆ ಕೊಡುತ್ತೀರಾ ? ಡಕಾಯಿತಿ ನಡೆಯದಹಾಗೆ ನೋಡಿಕೊಳ್ಳುತ್ತೀರಾ ? ನಿಮ್ಮನ್ನು ಹೊಗಳುವುದು ಬೇಡ, ತೆಗಳುವುದು ಬೇಡ.

ಶ್ರೀ ಆರ್. ಎಲ್. ಜಾಲಪ್ಪ.— ವಸ್ತುಸ್ಥಿತಿಯನ್ನು ಹೇಳುತ್ತಿದ್ದೇನೆ. ಈಗಿರುವ ವ್ಯವಸ್ಥೆಯಲ್ಲಿ ಡಕಾಯಿತಿಯನ್ನು ಪೂರ್ಣ ನಿಲ್ಲಿಸಂವುದಕ್ಕೆ ನನಗಾಗಲೀ, ನನ್ನ ಆಪ್ತನಿಗಾಗಲೀ ಬ್ರಹ್ಮ ಬಂದರೂ ಆಗುವುದಿಲ್ಲ. ಪೋಲೀಸ್‌ನವರೇ ಹೇಳಿದ್ದಾರೆ ಡಕಾಯಿತರನ್ನು ಸಾಯಿಸಿ ಎಂದು. ಡಕಾಯಿತರನ್ನು ಸಾಯಿಸಿದವರಿಗೆ ೨೫ ಸಾವಿರ ರೂಪಾಯಿಗಳ ಬಹುಮಾನ ಕೊಡುತ್ತೇವೆಂದು ಹೇಳಿದ್ದೇವೆ. ನೀವು ಹಳ್ಳಿಗಳಲ್ಲಿ ಜನರಿಗೆ ತರಬೇತಿಯನ್ನು ಕೊಡಿ. That does not mean to say that we are emasculated. Please understand us. We are doing our best.

ಅಧ್ಯಕ್ಷರು.— ಮಾನ್ಯ ರಾಜೂಗೌಡರು ಕಂದಾಯ ಮಂತ್ರಿಗಳ ಗಮನವನ್ನು ಸೆಳೆಯಿರಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಈ ಬಗ್ಗೆ ಪೂರ ಮಾಹಿತಿ ಬಂದಿಲ್ಲ. ಎರಡು ದಿವಸ ಬಿಟ್ಟು ಇದನ್ನು ತೆಗೆದುಕೊಳ್ಳೋಣ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೆ ನಿನ್ನೆ ದಿವಸ ಎನ್. ಜಿ. ಇ. ಎಫ್.ಗೆ ಸಂಬಂಧಪಟ್ಟಹಾಗೆ ಒಂದು ಕಾಲಿಂಗ್ ಅಟೆನ್‌ಷನ್ ಇತ್ತು. ಅದನ್ನು ಇವತ್ತು ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.— ಅದನ್ನು ತೆಗೆದುಕೊಳ್ಳುವುದಕ್ಕೆ ತಾವು ಪರ್ಮಿಷನ್ ಕೊಟ್ಟರೆ ನಾನು ಉತ್ತರ ಹೇಳುತ್ತೇನೆ.

ಅಧ್ಯಕ್ಷರು.— ಆಗಬಹುದು.

೩) ರಾಜಾಸ್ಥಾನದಲ್ಲಿ ಎನ್. ಜಿ. ಇ. ಎಫ್. ಸಂಸ್ಥೆಯವರು ರೆಕ್ಟಿಫೈಯರ್ ಸ್ಥಾಪಿಸುವ ಸಂದರ್ಭದಲ್ಲಿ ೭೫ ಲಕ್ಷ ರೂಪಾಯಿಗಳ ನಷ್ಟವಾಗಿರುವುದು

ಶ್ರೀ ಆರ್. ವೆಂಕಟರಾವಯ್ಯ — ರಾಜಾಸ್ಥಾನದಲ್ಲಿ ಎನ್. ಜಿ. ಇ. ಎಫ್. ಸಂಸ್ಥೆಯವರು ರೆಕ್ಟಿಫೈಯರ್ ಸ್ಥಾಪಿಸುವ ಸಂದರ್ಭದಲ್ಲಿ ಕೆಟ್ಟ ತಂತ್ರಜ್ಞಾನದಿಂದಾಗಿ ೭೫ ಲಕ್ಷರೂಗಳ ನಷ್ಟ ಆಗಿರುವುದರ ಬಗ್ಗೆ ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).— ತಮ್ಮ ಅನುಮತಿಯನ್ನು ಪಡೆದು ಈ ಕೆಳಕಂಡ ಹೇಳಿಕೆಯನ್ನು ಕೊಡುತ್ತೇನೆ.

> "ಎನ್.ಜಿ.ಇ.ಎಫ್. ಬೆಂಗಳೂರು ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಅಧಿಕಾರಿಗಳು ರಾಜಾಸ್ಥಾನದಲ್ಲಿ ರೆಕ್ಟಿಫೈಯರ್ ಸ್ಥಾಪಿಸಿದ ಸಂದರ್ಭದಲ್ಲಿ ಕೆಟ್ಟ ತಂತ್ರಜ್ಞಾನದಿಂದಾಗಿ ೭೫ ಲಕ್ಷ ನಷ್ಟಕ್ಕೆ ಈಡು ಮಾಡಿರುವುದರಿಂದ ಉಂಟಾದ ಪರಿಸ್ಥಿತಿಯ ಬಗ್ಗೆ ಮಾನ್ಯ ಭಾರಿ ಕೈಗಾರಿಕಾ ಮಂತ್ರಿಗಳ ಗಮನ ಸೆಳೆಯುವುದು."